ಅ) ಏಳು ವರ್ಷಗಳನ್ನು ಪೂರೈಸಿದಾಗ್ಯೂ ರಾಜ್ಯದಲ್ಲಿ ಅನುದಾನವನ್ನು ಪಡೆಯದಿರುವ ಕಾಲೇಜುಗಳ ಸಂಖ್ಯೆ ಎಷ್ಟು?

ಆ) ಈ ಸಂಸ್ಥೆಗಳಿಗೆ ಅನುದಾನವನ್ನು ಬಿಡುಗಡೆ ಮಾಡಲು ಬೇಕಾಗುವ ಕಾಲಾವಕಾಶವೆಷ್ಟು?

ಶ್ರೀ ಎಸ್.ಎಂ.ಯಾಹ್ಯಾ

(ಉನ್ನತ ಶಿಕ್ಷಣ ಸಚಿವರು)

56

ಉನ್ನತ ಶಿಕ್ಷಣ ವಿಭಾಗಕ್ಕೆ ಆಯವ್ಯಯದಲ್ಲಿ ಕೊಡಮಾಡಿರುವ ಮೊಬಲಗು ಮತ್ತು ಸಂಪನ್ಮೂಲಗಳನ್ನು ಆಧರಿಸಿ ಮುಂದೆ ಅನುದಾನವನ್ನು ಬಿಡುಗಡೆ ಮಾಡುವ ವಿಷಯವನ್ನು ಪರಿಶೀಲಿಸಲಾಗುವುದು.

ವಿಷಯ:- ಮುಳಬಾಗಿಲು ತಾಲ್ಲೂಕಿನಲ್ಲಿನ ಕಪ್ಪುಹಲಗೆ ಯೋಜನೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 263(612)

ಶ್ರೀ ಎಂ.ವಿ.ವೆಂಕಟಪ್ಪ(ಮುಳಬಾಗಿಲು)

ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಪ್ಪುಹಲಗೆ ಯೋಜನೆ ಅಡಿ ಮುಳಬಾಗಿಲು ತಾಲ್ಲೂಕಿನಲ್ಲಿ 1989-93ರ ಅವಧಿಯಲ್ಲಿ ನಿರ್ಮಾಣವಾದ ಶಾಲಾ ಕೊಠಡಿಗಳ ಸಂಖ್ಯೆ.

ಆ) 31-7-93 ರವರೆಗೆ ಪೂರ್ಣಗೊಂಡಿರುವ ಶಾಲಾ ಕೊಠಡಿಗಳ ಸಂಖ್ಯೆ.

ಇ) ಇದಕ್ಕಾಗಿ 31-7-93 ರವರೆಗೆ ಬಿಡುಗಡೆ ಮಾಡಿರುವ ಹಣ.

ಈ) ಒಟ್ಟು ಎಷ್ಟು ಮೊತ್ತಕ್ಕೆ ಆಡಳಿತಾತ್ಮಕ ಆದೇಶ ಹೊರಡಿಸಲಾಗಿದೆ.

ಉ) 31-7-93 ರಲ್ಲಿ ಪೂರ್ಣಗೊಳ್ಳದೇ ಇರುವ ಶಾಲಾ ಕೊಠಡಿಗಳ ಸಂಖ್ಯೆ.

ಊ) ಶಾಲಾ ಕೊಠಡಿಗಳನ್ನು ಪೂರ್ಣಗೊಳಿಸುವುದರ ಬಗ್ಗೆ ಅಗತ್ಯ ಹಣವನ್ನು ಬಿಡುಗಡೆ ಮಾಡದೇ ಇರಲು ಕಾರಣವೇನು?

ಋ) ಅಪೂರ್ಣ ಶಾಲಾ ಕೊಠಡಿಗಳನ್ನು ಪೂರ್ಣಗೊಳಿಸಲು ಅಗತ್ಯವಾಗುವ ಹಣವನ್ನು ಬಿಡುಗಡೆ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀಮತಿ. ನಾಗಮ್ಮ ಸಿ.ಕೇಶವಮೂರ್ತಿ

(ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು)

ಕಪ್ಪುಹಲಗೆ ಯೋಜನೆ ಅಡಿ (ಮೂರನೇ ಹಂತ) ಮುಳಬಾಗಿಲು

ತಾಲ್ಲೂಕಿನಲ್ಲಿ ಮಂಜೂರಾದ ಶಾಲಾ ಕೊಠಡಿಗಳ ಸಂಖ್ಯೆ - 170 ಪೂರ್ಣಗೊಂಡ ಶಾಲಾ ಕೊಠಡಿಗಳ ಸಂಖ್ಯೆ (31-7-93ರವರೆಗೆ)

134

ರೂ. 50.40 ಲಕ್ಷಗಳು

ರೂ. 50.40 ಲಕ್ಷ

36

ಹಣವನ್ನು ಆನುಷ್ಠಾನಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿದೆ, ಹಾಗೂ ಮುಳಬಾಗಿಲು ಉಪವಿಭಾಗದ ಸಹಾಯಕ ಎಕ್ಸಿಕ್ಯುಟಿವ್ ಇಂಜಿನಿಯರ್ ಇವರ ಅಂದಾಜಿನಂತೆ ಅಪೂರ್ಣ ಶಾಲಾ

ಕೊಠಡಿಗಳನ್ನು ಪೂರ್ಣಗೊಳಿಸಲು ಅಗತ್ಯವಾಗಿರುವ ರೂ. 16.268 ಲಕ್ಷಗಳನ್ನು ಜವಾಹರ್ ರೋಜ್‌ಗಾರ್ ಯೋಜನೆಯ ಶೇಕಡಾ 80ರ 93-94ರ ಮಂಡಲ ನಿಧಿಯಿಂದ ಬಿಡುಗಡೆ ಮಾಡಲಾಗುತ್ತಿದೆ.

ಉದ್ಭವಿಸುವುದಿಲ್ಲ

ವಿಷಯ:- ಸರ್ಕಾರದಿಂದ ನಡೆಸುತ್ತಿರುವ ವೈದ್ಯಕೀಯ ಮಹಾ ವಿದ್ಯಾಲಯಗಳು ಮತ್ತು ಅಲ್ಲಿಯ ವಿದ್ಯಾರ್ಥಿಗಳ ಪ್ರವೇಶದ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 267(542)

ಶ್ರೀ ಆರ್.ಎಲ್.ಜಾಲಪ್ಪ(ದೊಡ್ಡಬಳ್ಳಾಪುರ)

ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸರ್ಕಾರದಿಂದ ನಡೆಸುತ್ತಿರುವ ವೈದ್ಯಕೀಯ ಮಹಾವಿದ್ಯಾಲಯಗಳು ಮತ್ತು ಅಲ್ಲಿಯ ವಿದ್ಯಾರ್ಥಿಗಳ ಪ್ರವೇಶ ಸಂಖ್ಯೆ?

ಆ) ಐಎಂಸಿ ಪ್ರಕಾರ ಪ್ರತಿಯೊಂದು ವಿಷಯ ವಿಭಾಗಗಳಲ್ಲಿ ಹುದ್ದೆಯ ಮಂಜೂರಾತಿ ಪ್ರತಿ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ವಿದ್ಯಾರ್ಥಿಗಳ ಸೇರ್ಪಡೆಗೆ ಅನುಗುಣವಾಗಿ

ಇ) ಈಗ ವಿಷಯ ವಿಭಾಗಗಳಲ್ಲಿ ಹುದ್ದೆ ಮಂಜೂರಾತಿ ಮತ್ತು ಪ್ರತಿ ಕಾಲೇಜಿನಲ್ಲಿರುವ ಹುದ್ದೆಗಳ ಕೊರತೆ?

ಈ) ಐಎಂಸಿಯಿಂದ ಪ್ರತಿ ಕಾಲೇಜಿಗೆ ಮಂಜೂರಾದ ಪ್ರವೇಶ ಸಂಖ್ಯೆ?

ಉ) ಆ ಕಾಲೇಜುಗಳಲ್ಲಿ ಖಾಲಿಯಿರುವ ಹುದ್ದೆಗಳನ್ನು ಯಾವಾಗಿನಿಂದ ಭರ್ತಿ ಮಾಡಿಲ್ಲ?

ಶ್ರೀ ಜಿ.ರಾಮಕೃಷ್ಣ

(ವೈದ್ಯಕೀಯ ಶಿಕ್ಷಣ ಸಚಿವರು)

ಪಟ್ಟಿ ಲಗತ್ತಿಸಿದೆ –ಅನುಬಂಧ-1

ಐಎಂಸಿ ಪ್ರಕಾರ ಪ್ರತಿ 100 ವಿದ್ಯಾರ್ಥಿಗಳ ಸೇರ್ಪಡೆಗೆ ಕನಿಷ್ಠ 1 ಪ್ರಾಧ್ಯಾಪಕರು, 4 ಸಹಾಯಕ ಪ್ರಾಧ್ಯಾಪಕರು ಮತ್ತು 9 ಉಪನ್ಯಾಸಕರು ಇರಬೇಕು.

ಪಟ್ಟಿ ಲಗತ್ತಿಸಿದೆ -ಅನುಬಂಧ-2-

ಅನುಬಂಧ -1ರಲ್ಲಿದ್ದಂತೆ

1982 ರಲ್ಲಿ ಆಯ್ಕೆಯಾದ ಭೋಧಕ ವರ್ಗದವರ ಮೇಲೆ ಅನೇಕ ರಿಟ್ ಅರ್ಜಿಗಳಿದ್ದು ಈಗ, ಈ ವಿಷಯವು ಸರ್ವೋಚ್ಚ ನ್ಯಾಯಾಲಯದಲ್ಲಿ ಅಂತಿಮ ತೀರ್ಪಿಗಾಗಿ ಕಾಯಲಾಗುತ್ತಿದೆ. ಈ ಕಾರಣದಿಂದ ತದನಂತರ ಉಪನ್ಯಾಸಕರ ಹುದ್ದೆಯಲ್ಲಿ ನೇಮಕಾತಿ ಮಾಡಿರುವುದಿಲ್ಲ.

ಅನುಬಂಧ-1

ವೈದ್ಯಕೀಯ ಮಹಾವಿದ್ಯಾಲಯಗಳು:

	ಹೆಸರು	ಪ್ರವೇಶ ಸಾಮರ್ಥ್ಯ
1)	ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು	200 ಸೀಟು
2)	ವೈದ್ಯಕೀಯ ಮಹಾವಿದ್ಯಾಲಯ, ಮೈಸೂರು	175 ಸೀಟು
3)	ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ,ಹುಬ್ಬಳ್ಳಿ	130 ಸೀಟು
4)	ವೈದ್ಯಕೀಯ ಮಹಾವಿದ್ಯಾಲಯ, ಬಳ್ಳಾರಿ	130 ಸೀಟು